## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 301 |
| 2 | ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15-02-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಿಳಂಬಕ್ಕೆ ವಿಧಿಸುತ್ತಿರುವ ದಂಡ ಮತ್ತು ಬಡ್ಡಿ ಪ್ರಮಾಣವೇನು (ಸಂಪೂರ್ಣ ವಿವರ ನೀಡುವುದು) | ತೆರಿಗೆದಾರರು ನಿಗಧಿತ ಅವಧಿಯಲ್ಲಿ ಆಸ್ತಿತೆರಿಗೆಯನ್ನು ಪಾವತಿಸದೇ ಇದ್ದಲ್ಲಿ ವಿಳಂಬ ಪಾವತಿಗೆ (ಅಂದರೆ, ಮೊದಲನೇ ಕಂತು ನಿರ್ಧಾರಣೆ ಸಾಲಿನ ಮೇ 30 ರೊಳಗೆ ಹಾಗೂ ಎರಡನೇ ಕಂತು ನಿರ್ಧಾರಣೆ ಸಾಲಿನ ನವೆಂಬರ್ 29 ರೊಳಗೆ) ಕೆಎಂಸಿ ಕಾಯ್ದೆ 1976 ಪ್ರಕರಣ 108ಎ ಅನ್ವಯ ಮಾಸಿಕ ಶೇ.2 ರಷ್ಟು (2020-21ನೇ ಸಾಲಿನವರೆಗೆ) ಹಾಗೂ ಬಿಬಿಎಂಪಿ ಕಾಯ್ದೆ 2020 ಜಾರಿಗೆ ಬಂದ ಅವಧಿಯಿಂದ ಅಂದರೆ 2021-22ನೇ ಸಾಲಿನಿಂದ ವಾರ್ಷಿಕ ಶೇ.9ರಷ್ಟು ಬಡ್ಡಿಯನ್ನು ಹಾಗೂ ದಂಡ ರೂ.100 ಗಳನ್ನು ವಿಧಿಸಿ ವಸೂಲಾತಿ ಮಾಡಲಾಗುತ್ತಿದೆ. |
| ಆ) | 2021-22ನೇ ಸಾಲಿನಿಂದ ಇಲ್ಲಿಯವರೆಗೆ ದಂಡ ಮತ್ತು ಬಡ್ಡಿ ರೂಪದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಂದಿರುವ ಒಟ್ಟು ಮೊತ್ತವೆಷ್ಟು; (ವರ್ಷವಾರು ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2021-22ನೇ ಸಾಲಿನಿಂದ ಇಲ್ಲಿಯವರೆಗೆ ವಿಳಂಬ ಪಾವತಿ ಪ್ರಕರಣಗಳಲ್ಲಿ ದಂಡ ಮತ್ತು ಬಡ್ಡಿ ಸಂಗ್ರಹಿಸಲಾಗಿರುವ ಒಟ್ಟು ಮೊತ್ತದ ವರ್ಷವಾರು ಮಾಹಿತಿಯ ವಿವರ ಈ ಕೆಳಕಂಡಂತಿರುತ್ತದೆ. |

| ಆರ್ಥಿಕ ಸಾಲು | ದಂಡ (ಮೊತ್ತ ರೂ. ಕೋಟಿಗಳಲ್ಲಿ) | ಬಡ್ಡಿ (ಮೊತ್ತ ರೂ. ಕೋಟಿಗಳಲ್ಲಿ) |
|---|---|---|
| 2021-22 | 4.57 | 225.65 |
| 2022-23 | 3.19 | 180.74 |
| 2023-24 | 4.51 | 170.21 |

...2.

| | | |
|---|---|---|
| ಇ) | ತೆರಿಗೆ ವಿಳಂಬ ಪಾವತಿಗಾಗಿ ಸಾರ್ವಜನಿಕರಿಗೆ ವಿಧಿಸುತ್ತಿರುವ ದಂಡ ಮತ್ತು ಬಡ್ಡಿ ಪ್ರಮಾಣ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಈ ಹಿಂದೆ ಕೆಎಂಸಿ ಕಾಯ್ದೆ 1976ರ ಅಡಿಯಲ್ಲಿ ವಿಧಿಸುತ್ತಿದ್ದ ಮಾಸಿಕ ಶೇ.2 ರಷ್ಟು ಬಡ್ಡಿದರದ ಪ್ರಮಾಣವು ಬಿಬಿಎಂಪಿ ಕಾಯ್ದೆ 2020ರ ಅಡಿಯಲ್ಲಿ 2021–22ನೇ ಆರ್ಥಿಕ ಸಾಲಿನಿಂದ ಬಡ್ಡಿದರವನ್ನು ವಾರ್ಷಿಕ ಶೇ.9 ರಷ್ಟಿಗೆ ಕಡಿಮೆಗೊಳಿಸಿ ವಿಧಿಸಿ ಸಂಗ್ರಹಿಸಲಾಗುತ್ತಿದೆ. |
| ಈ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ಕ್ಕೆ ತಿದ್ದುಪಡಿ ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಯಾವ ಕಾಲ ಮಿತಿಯೊಳಗೆ ತಿದ್ದುಪಡಿ ಮಾಡಲಾಗುವುದು. | ಬಿಬಿಎಂಪಿ ಕಾಯ್ದೆ 2020ರ ಅಧ್ಯಾಯ XIII ತೆರಿಗೆಗಳು ಅಧ್ಯಾಯಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ನಅಇ 82 ಎಂಎನ್‌ಯು 2024(ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ